**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 78/2022**

**ಪಿ ಡಬ್ಲ್ಯೂ/1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 24/09/2024.**

**ಮುಂ. ಪಾಟೀ ಸವಾಲುಃ ಶ್ರೀ ಎ ವಿ ಕೆ ವಕೀಲರಿಂದ 1 ನೇ ಪ್ರತಿವಾದಿ ಪರ ವಕೀಲರುಃ**

7. ನಾನು ದ್ವಿತೀಯ ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಬೈರಿದೇವರಕೋಪ್ಪ ಗ್ರಾಮದಲ್ಲಿರುವ ಶಾಂತಿನಿಕೇತನ ಎಂಬ ಶಿರೋನಾಮೆಯಲ್ಲಿರುವ ಆರ್ ಸಿ ಸಿ ಮನೆ ಮತ್ತು ಖುಲ್ಲಾ ಜಾಗೆ ಬ್ಲಾಕ್ ನಂಬರಃ282 ಕ ಪ್ಲಾಟ ನಂಃ68 ಮೂಲತಃ ನನ್ನ ತಾಯಿ 1 ನೇ ಪ್ರತಿವಾದಿಯ ಹೆಸರಿಗೆ ಇತ್ತು ಎಂದರೆ ಸರಿ. ಸದರಿ ಆಸ್ತಿಯನ್ನು ದಿಃ13.10.2021 ರಂದು ನನ್ನ ತಾಯಿ 1 ನೇ ಪ್ರತಿವಾದಿ ನನ್ನ ಹೆಸರಿಗೆ ಬಕ್ಷೀಸ್ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಯ ಆನಲೈನ ಪ್ರತಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿಃ2 ಎಂದು ಗುರುತಿಸಲಾಯಿತು.

8. ಬೈರಿದೇವರಕೋಪ್ಪ ಗ್ರಾಮದಲ್ಲಿರುವ ಶಾಂತಿನಿಕೇತನ ಕಾಲೋನಿಯಲ್ಲಿರುವ ಖುಲ್ಲಾ ಜಾಗೆ ಬ್ಲಾಕ್ ನಂಬರಃ282 ಕ ಪ್ಲಾಟ ನಂಃ18 ರಿಂದ 37/1 ರ ಪೈಕಿ ಪ್ಲಾಟ ನಂಃ1

ಅಂಗಡಿ ನಂ:1 ರ ಕುರಿತು ನನ್ನ ತಾಯಿ 1 ನೇ ಪ್ರತಿವಾದಿ ಸದರಿ ವಾಣಿಜ್ಯ ಮಳಿಗೆಯನ್ನು ನನ್ನ ಹೆಸರಿಗೆ ದಿ:13.10.2021 ರಂದು ಬಕ್ಷೀಸ್ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಯ ಆನಲೈನ ಪ್ರತಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ:3 ಎಂದು ಗುರುತಿಸಲಾಯಿತು.

9. ನಾನು ಈ ದಾವೆಯನ್ನು ನನ್ನ ತಾಯಿಗೆ ಸಂಬಂದಪಟ್ಟ ಹೊಲ ಶಿರೂರು ಗ್ರಾಮದಲ್ಲಿ ಇದ್ದು, ಅದಕ್ಕೆ ಸಂಬಂದಪಟ್ಟ ಹಾಗೇ ದಾಖಲಿಸಿರುತ್ತೇನೆ. ಶಿರೂರು ಗ್ರಾಮದ ವಿಪಿಸಿ ನಂ:327/ಎ/2 ನನ್ನ ತಾಯಿಯ ತಂದೆಗೆ ಸೇರಿದ ಆಸ್ತಿ ಎಂದರೆ ಸಾಕ್ಷಿ ಸದರಿ ವಿಪಿಸಿ ಎಕ್ಸಟ್ರ್ಯಾಕ್ಟನ್ನು ನೋಡಿ ಅದು 2 ನೇ ಪ್ರತಿವಾದಿಯ ಹೆಸರಿಗೆ ಇದ್ದು, ಅದು ನನ್ನ ತಾಯಿ 1 ನೇ ಪ್ರತಿವಾದಿಯ ಅಣ್ಣನಿಗೆ ಅವರ ಅಜ್ಜನಿಂದ ಬಂದ ಆಸ್ತಿ ಎಂದು  ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಡಿ:4 ಎಂದು ಗುರುತಿಸಲಾಯಿತು.

10. ಸಾಕ್ಷಿಗೆ ಸ.ನಂ:82/ಬಿ ಕ್ಷೇತ್ರ 3 ಎಕರೆ ಜಮೀನು ನನ್ನ ತಾಯಿ 1 ನೇ ಪ್ರತಿವಾದಿ ಹೆಸರಿಗೆ ಶಾಡಂಬಿ ಗ್ರಾಮದಲ್ಲಿರುವ ಜಮೀನು ಆಗಿರುತ್ತದೆ, ಆದರೆ ಸಾಕ್ಷಿ ನನಗೆ ಅದರ ಸರ್ವೇ ನಂಬರ ಗೊತ್ತಿರುವುದಿಲ್ಲ ಅಂತ ಹೇಳಿದ್ದು, ಸಾಕ್ಷಿ ಸದರಿ ಜಮೀನಿನ ಉತಾರವನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ:5 ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿ:16.08.1985 ರ ಖರೀದಿ ಪತ್ರದ ಮೂಲ ದಾಖಲೆಯನ್ನು ತೋರಿಸಿ ಸದರಿ ದಾಖಲೆ ನಿಡಿ:5 ರಲ್ಲಿ ಹೇಳಿದ ಜಮೀನನ್ನು 1 ನೇ ಪ್ರತಿವಾದಿ ಖರೀದಿಸಿದ ಜಮೀನು ಎಂಬ ಸೂಚನೆಯನ್ನು ಸಾಕ್ಷಿ ಒಪ್ಪಿದ್ದರಿಂದ ಸದರಿ ದಾಖಲೆಯನ್ನು ನಿಡಿ:6 ಎಂದು ಗುರುತಿಸಲಾಯಿತು. ನನ್ನ ಹೆಣ್ಣಜ್ಜನ ಹೆಸರು ಭರಮಪ್ಪ ಎಂದರೆ ಸರಿ. ಅವರಿಗೆ ಮಹಾದೇವಿ ಎಂಬ ಮಗಳ ಇದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಮುಂದುವರೆದು ಇನ್ನಿಬ್ಬರ ಹೆಣ್ಣು ಮಕ್ಕಳಾದ ಮಲ್ಲಮ್ಮ ಅಂದರೆ 1 ನೇ ಪ್ರತಿವಾದಿ ಹಾಗೂ ನಾಗವ್ವ ಎಂಬ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಎಂದು ನುಡಿಯುತ್ತಾರೆ. ಭರಮಪ್ಪ ಇವರಿಗೆ ಒಬ್ಬ ಗಂಡ ಮಗ ಇದ್ದಾನೆ ಎಂದರೆ ಸರಿ.

11. ಮಹಾದೇವಿ ಇವರು ಮೂರು ನಾಲ್ಕು ತಿಂಗಳ ಹಿಂದೆ ತೀರಿಕೊಂಡಿರುತ್ತಾರೆ. ಮಹಾದೇವಿ ಅವರಿಗೆ ಇಬ್ಬರು ಗಂಡು ಮಕ್ಕಳು ಇದ್ದಾರೆ. ನಾಗವ್ವ ಇವರು ಸಹ ತೀರಿಕೊಂಡಿದ್ದು, ಅವರಿಗೆ ನಾಲ್ಕು ಜನ ಮಕ್ಕಳಾದ ಮಹಾದೇವಪ್ಪ, ಗೀರಿಜಾ, ಗೌರವ್ವ ಹಾಗೂ ಮಂಜುನಾಥ ಇರುತ್ತಾರೆ. ಇವರೆಲ್ಲರೂ ಸಹ ನನ್ನ ಅಜ್ಜ ಭರಮಪ್ಪ ಇವರ ವಾರಸುದಾರರು ಎಂದರೆ ಸರಿ. ಇವರೆಲ್ಲರೂ ಸಹ ಈ ದಾವೆಯ ಅವಶ್ಯಕ ಪಕ್ಷಗಾರರು ಎಂದರೆ ಸಾಕ್ಷಿ ಅದು

ಅವರಿಗೆ ಬಿಟ್ಟಿದ್ದು ಅವರಿಗೆ ಬೇಕೂ ಎಂದರೆ ಅವರು ಹಾಕಬೇಕು ಎಂದು ನುಡಿಯುತ್ತಾರೆ. ಸದರಿಯವರು ಅವಶ್ಯಕ ಪಕ್ಷಗಾರರು ಇದ್ದರು ಸಹ ಆಸ್ತಿಯನ್ನು ನಾನು ಒಬ್ಬಳೇ ಎತ್ತಿಹಾಕುವ ಉದ್ದೇಶದಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಅವಗೇನಾದರು ಹೊರಗಿಂದ ಹೊರಗೆ ಕೊಟ್ಟ ಮುಗಿಸಿರಬೇಕು, ಆದರೆ ನನಗೆ ನನ್ನ ಅಜ್ಜನ ಆಸ್ತಿ ಬೇಕು ಎಂದು ನುಡಿಯುತ್ತಾರೆ. ಅವರಿಗೆ ನಾನು ಹೊರಗಿಂದ ಹೊರಗೆ ಕೊಟ್ಟಿರಬಹುದು ಎಂದು ಹೇಳಿದ್ದು ಆ ರೀತಿ ಅವರಿಗೆ ಏನು ಕೊಟ್ಟಿದ್ದಾರೆ ಅಂತ ನನಗೆ ಗೊತ್ತಿಲ್ಲ.

12. ಭರಮಪ್ಪ ಇವರಿಗೆ ಶಿರೂರು ಗ್ರಾಮದ ಸ.ನಂಃ292/4 ಕ್ಷೇತ್ರ 4 ಎಕರೆ 30 ಗುಂಟೆ, ಸ.ನಂಃ177/8 ಕ್ಷೇತ್ರ 14 ಗುಂಟೆ, ರಿ.ಸ.ನಂಃ178/6 ಕ್ಷೇತ್ರ 20 ಗುಂಟೆ, ರಿ.ಸ.ನಂಃ292/4 ಕ್ಷೇತ್ರ 4 ಎಕರೆ 38 ಗುಂಟೆ, ರಿ.ಸ.ನಂಃ179/9 ಕ್ಷೇತ್ರ 20 ಗುಂಟೆ, 177/10 ಕ್ಷೇತ್ರ 1 ಗುಂಟೆ ಈ ಎಲ್ಲಾ ಜಮೀನುಗಳು ಭರಮಪ್ಪನ ಆಸ್ತಿಗಳು ಎಂದರೆ ಸಾಕ್ಷಿ ಮೊದಲು ಇರಬಹುದು ಅಂತ ನುಡಿದು, ನಂತರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಆಸ್ತಿಗಳು ಸಹ ಪಿತ್ರಾರ್ಜಿತ ಆಸ್ತಿಗಳು ಆಗಿದ್ದರಿಂದ ಅವುಗಳು ಸಹ ಈ ದಾವೆಯಲ್ಲಿ ಅವಶ್ಯ ಆಸ್ತಿಗಳು ಆಗಿರುತ್ತವೆ ಎಂದರೆ ಸಾಕ್ಷಿ ನನಗೆ ನನ್ನ ತಾಯಿಯ ಹೆಸರಿಗೆ ಇರುವ ಆಸ್ತಿ ಮಾತ್ರ ಬೇಕಾಗಿದ್ದರಿಂದ ಅದನ್ನು ಮಾತ್ರ ಕೇಳಿದ್ದೇನೆ ಎಂದು ನುಡಿಯುತ್ತಾರೆ. ಈ ಮೇಲೆ ಹೇಳಿದ ಜಮೀನುಗಳು ಎಲ್ಲಾ ಪಿತ್ರಾರ್ಜಿತ ಆಸ್ತಿಗಳು ಆಗಿದ್ದರಿಂದ ಅವುಗಳನ್ನು ಈ ದಾವೆಯಲ್ಲಿ ಸೇರಿಸದ ಕಾರಣ ಈ ದಾವೆ ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಸರಕಾರಿ ನೌಕರಿ ಮಾಡುತ್ತಾರೆ. ನನ್ನ ಗಂಡ ಹಾನಗಲ್ ನಲ್ಲಿ ಡೆಪ್ಯೂಟಿ ತಹಶೀಲ್ದಾರ ಆಗಿ ಕೆಲಸ ಮಾಡುತ್ತಾರೆ. ಅವರ ಹೆಸರು ತಮ್ಮಣ್ಣ ಕಲ್ಲಪ್ಪ ಕಾಂಬಳೆ.

13. ನನ್ನ ತಾಯಿ 1 ನೇ ಪ್ರತಿವಾದಿ ನನ್ನ ಗಂಡನ ವಿರುದ್ಧ ಸಿಸಿ ನಂಃ358/2023 ರಂತೆ ಒಂದು ಚೆಕ್ಕ ಅಮಾನ್ಯ ಪ್ರಕರಣ ದಾಖಲಿಸಿರುತ್ತಾರೆ ಎಂದು ಸೂಚಿಸಿ ಸಿಐಎಸ್ ನ ದಾಖಲೆಯನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿ ತನ್ನ ಗಂಡನ ಹೆಸರು ಇರುವುದನ್ನು ಒಪ್ಪಿದ್ದರಿಂದ ಅದನ್ನು ನಿಡಿಃ7 ಎಂದು ಗುರುತಿಸಲಾಯಿತು. ನನ್ನ ತಾಯಿ ಪುಡ್ ಕಾರ್ಪೂರೇಷನ ಆಫ್ ಇಂಡಿಯಾದಲ್ಲಿ ಅಸಿಸ್ಟಟೆಂಟ್ ಆಗಿ ಕರ್ತವ್ಯ ನಿರ್ವಹಿಸುತಿದ್ದರು. 1 ನೇ ಪ್ರತಿವಾದಿ ಈಗ ನಿವೃತ್ತಿ ಹೊಂದಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ನಿವೃತ್ತಿ ಹೊಂದುವವರೆಗೂ ನನ್ನ ಜೊತೆಗೆ ವಾಸವಾಗಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ಈಗ ನನ್ನ ದೊಡ್ಡಮ್ಮನ ಊರು ಶಾಡಂಬಿ ಗ್ರಾಮದಲ್ಲಿ ವಾಸವಾಗಿದ್ದಾರೆ. 1 ನೇ ಪ್ರತಿವಾದಿ ಅಲ್ಲಿ ಶಾಡಂಬಿಯಲ್ಲಿ ನನ್ನ ದೊಡ್ಡಮ್ಮ ಮನೆ

ಕಟ್ಟಿದ್ದರಿಂದ ಹಾಗೂ ನನ್ನ ದೊಡ್ಡಮ್ಮಳಿಗೆ ಆರೋಗ್ಯ ಸರಿ ಇರದ ಕಾರಣ ಕೇಲವು ದಿನ ಅಲ್ಲಿ ಇರುವುದಾಗಿ ವಾಸವಾಗಿರುತ್ತಾರೆ. ಈ ರೀತಿ ಅವರು 2022 ರಿಂದ ಅಲ್ಲಿ ವಾಸವಾಗಿದ್ದು ಎಂದು ನುಡಿದು, ಸಾಕ್ಷಿ ಮುಂದುವರೆದು ಅವರು ಹೋಗುವುದು ಬರುವುದು ಮಾಡುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಈ ರೀತಿ ಯಾವ ಯಾವ ದಿನಾಂಕದಂದು ನಮ್ಮ ಮನೆಗೆ ಬಂದಿದ್ದರು ಅಂತ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. 1 ನೇ ಪ್ರತಿವಾದಿ ಹಾಗೂ ನನ್ನ ನಡುವೆ ಸಂಬಂಧ ಅಷ್ಟಾಗಿ ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದಾಗ ನನಗೆ ಭಯ ಹಾಗೂ ಅವರ ಮೇಲೆ ಬೇಜಾರು ಇದಿದ್ದರಿಂದ ಅವರೊಂದಿಗೆ ನಾನು ಮಾತಾನಾಸಿಡಿರುವುದಿಲ್ಲ. ನೀವು ನಿಮ್ಮ ತಾಯಿಗೆ ಯಾಕೆ ಭಯ ಬಿದಿದ್ದು ಎಂದರೆ ಸಾಕ್ಷಿ ಅವರು ಸೀಟಿನ ಸ್ವಭಾವದವರು ಎಂದು ನುಡಿಯುತ್ತಾರೆ. ನಾನು 1 ನೇ ಪ್ರತಿವಾದಿ ಸೀಟ್ಟಿನ ಸ್ವಭಾವದವರು ಎಂದು ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

14. ನಾನು ಮತ್ತು ನನ್ನ ಗಂಡ ಸೇರಿ 1 ನೇ ಪ್ರತಿವಾದಿ ಹೆಸರಿನಲ್ಲಿ ಹುಬ್ಬಳ್ಳಿಯಲ್ಲಿರುವ ಆಸ್ತಿಗಳನ್ನು ನನ್ನ ಹೆಸರಿಗೆ ಮಾಡಿಕೊಂಡು ನಂತರದಲ್ಲಿ ಅವರಿಗೆ ಮಾನಸಿಕ ಹಾಗೂ ದೈಹಿಕ ತೊಂದರೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಗಂಡ 1 ನೇ ಪ್ರತಿವಾದಿಗೆ ನಿದ್ದೆ ಮಾತ್ರೆಗಳನ್ನು ನೀಡಿ ಅವರನ್ನು ಮುಗಿಸಬೇಕು ಎಂದು ಪ್ರಯತ್ನಪಟ್ಟಿದ್ದಕ್ಕೆ 1 ನೇ ಪ್ರತಿವಾದಿ ನಮ್ಮಿಂದ ದೂರವಾಗಿ ಅವರ ಅಕ್ಕನ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ.

15. ನನ್ನ ಮದುವೆ ನನ್ನ ದೊಡ್ಡಮ್ಮನ ಮನೆಯಲ್ಲಿ ಶಾಡಾಂಬಿ ಗ್ರಾಮದಲ್ಲಿ ಹಿರಿಯರ ಸಮಕ್ಷಮ ಆಯಿತು ಎಂದರೆ ಸರಿ.ನನ್ನ ಮದುವೆಯನ್ನು ನನ್ನ ದೊಡ್ಡಮ್ಮ ಮಾಡಿಕೊಟ್ಟರು ಎಂದರೆ ಸಾಕ್ಷಿ ನನ್ನ ತಾಯಿ ಮಾಡಿಕೊಟ್ಟರು ಎಂದು ನುಡಿಯುತ್ತಾರೆ. ನನ್ನ ತಂದೆ 2015 ರಲ್ಲಿ ತೀರಿಕೊಂಡಿರುತ್ತಾರೆ.

16. ನಿಮ್ಮ ತಂದೆಗೆ ಮೊದಲನೇ ಹೆಂಡತಿಯಿಂದ ಮಕ್ಕಳು ಏನಾದರು ಇದ್ದರಾ ಎಂದರೆ ಸಾಕ್ಷಿ ಇದ್ದಾರೆ, ಆದರೆ ನಾವು ಅವರ ಸಂಪರ್ಕದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ 1 ನೇ ಪ್ರತಿವಾದಿಗೆ ಅವರು ಗರ್ಭಿಣಿ ಇದ್ದಾಗ ಬಿಟ್ಟು ಹೋಗಿರುತ್ತಾರೆ ಎಂದರೆ ಸಾಕ್ಷಿ ಇಲ್ಲ, 1 ನೇ ಪ್ರತಿವಾದಿ ಇವರೊಂದಿಗೆ ಅವರು ಸಾಯುವರೆಗೂ ವಾಸವಾಗಿದ್ದರು ಎಂದು ನುಡಿಯುತ್ತಾರೆ. ಈ ರೀತಿ ನಿಮ್ಮ ತಂದೆ 1 ನೇ ಪ್ರತಿವಾದಿ ಇವರೊಂದಿಗೆ ಸಾಯುವರೆಗೆ ವಾಸವಾಗಿರುವ ಬಗ್ಗೆ ಸಾಕ್ಷಿ ಏನಾದರು ಇದಿಯಾ ಎಂದರೆ ಸಾಕ್ಷಿ ನಾವು ಮನೆಕಟ್ಟಿಸಿ ಅದನ್ನು ಅವರೊಂದಿಗೆ ಸಂದರ್ಭವನ್ನು ಆಚರಿಸಿರುತ್ತೇವೆ ಎಂದು ನುಡಿಯುತ್ತಾರೆ. ಆ ಬಗ್ಗೆ ಪೋಟೋ ಏನಾದರುನ್ಯಾಯಾಲಯಕ್ಕೆ

ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಫೋಟೋವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ತೊಂದರೆ ಇಲ್ಲ ಎಂದು ನುಡಿಯುತ್ತಾರೆ.

17. 1 ನೇ ಪ್ರತಿವಾದಿ ತನ್ನ ಗಂಡ ತಾನು ಗರ್ಭಿಣಿ ಇದ್ದಾಗಲೇ ತನ್ನನ್ನು ಬಿಟ್ಟುಹೋಗಿರುವ ಬಗ್ಗೆ ಹೇಳುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯೇ ನನ್ನನ್ನು ಜೋಪಾನ ಜತನ ಮಾಡಿ ನನ್ನ ಶೈಕ್ಷಣಿಕ ಖರ್ಚು ವೆಚ್ಚಗಳನ್ನ ಭರಿಸಿರುತಾತರೆ ಎಂದರೆ ಸಾಕ್ಷಿ ತಂದೆ ತಾಯಿ ಇಬ್ಬರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ನನ್ನ ತಂದೆ ಸಹ ಮಾಡಿದ್ದಾರೆ ಅಂತ ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಸ್ವಂತವಾಗಿ ನೌಕರಿ ಮಾಡಿ ನಿಡಿಃ2 ಮತ್ತು 3 ರಲ್ಲಿ ಹೇಳಿರುವ ಆಸ್ತಿಗಳನ್ನು ತನ್ನ ಆದಾಯದಿಂದ ಖರೀದಿಸಿ ನಂತರದಲ್ಲಿ ಅವುಗಳನ್ನು ನನಗೆ ಬಕ್ಷೀಸ್ ಪತ್ರದ ಮೂಲಕ ನೀಡಿರುತ್ತಾರೆ ಎಂದರೆ ಸಾಕ್ಷಿ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ 1 ನೇ ಪ್ರತಿವಾದಿಗೆ ಸಂಬಂಧ ಇರುವುದಿಲ್ಲ, ಅದು ನನ್ನ ಅಜ್ಜ ಭರಮಪ್ಪನ ಸ್ವಯಾರ್ಜಿತ ಆಸ್ತಿಆಗಿರುತ್ತದೆ ಎಂದರೆ ಸರಿಯಲ್ಲ.

18. ಈ ದಾವೆಯಲ್ಲಿ ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂದು ಹೇಳಲಾಗುತ್ತಾ ಎಂದರೆ ಸಾಕ್ಷಿ 1 ನೇ ಪ್ರತಿವಾದಿ ಅವರ ಅಣ್ಣ ಪೀರಪ್ಪ ಅವರೊಂದಿಗೆ ಕರಾರು ಮಾಡಿಕೊಂಡಿರುವ ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಅದನ್ನು ಹೊರತುಪಡಿಸಿ ಇನ್ನಿತರ ದಾಖಲೆಗಳನ್ನು ಹಾಜರುಪಡಿಸಿದ್ದು ಆದರೆ ಅವುಗಳ ಬಗ್ಗೆ ವಿವರವಾಗಿ ಹೇಳಲಾಗುವುದಿಲ್ಲ. ಸದರಿ ದಾಖಲೆಗಳನ್ನು ನಾನು ಮತ್ತು ನನ್ನ ಸಂಬಂಧಿಕ ಎಂದರೆ ನನ್ನ ತಮ್ಮ ಮಂಜುನಾಥ ಸಣ್ಣಪ್ಪನವರ ಇವರೊಂದಿಗೆ ತೆಗೆಸಿರುತ್ತೇನೆ. ಮಂಜುನಾಥ ಸಣ್ಣಪ್ಪನವರ ಇವರು ನನ್ನ ತಾಯಿಯ ಅಕ್ಕನ ಮಗ ಎಂದರೆ ಸರಿ. ನಾನು ಈ ದಾವೆಯಲ್ಲಿ ಹಾಜರುಪಡಿಸಿದ್ದ ನಿಪಿಃ1 ರಿಂದ 14 ದಾಖಲೆಗಳು ಖೊಟ್ಟಿಯಾಗಿರುತ್ತವೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಗೆ ತೊಂದರೆ ನೀಡಲು ನನ್ನ ಗಂಡನೊಂದಿಗೆ ಶಾಮೀಲಾಗಿ ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ 2 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**